ಮುಚ್ಚುವಾಗಲೂ 'ಇಂದ್ರಿಯಗಳು ತಮ್ಮ ತಮ್ಮ ವಿಷಯಗಳಲ್ಲಿ ಪ್ರವರ್ತಿಸುತ್ತವೆ' ಎಂದು ನಿಶ್ಚಯಿಸಿಕೊಂಡು, 'ನಾನು ಏನನ್ನೂ ಮಾಡುತ್ತಿಲ್ಲ' ಎಂದು ತಿಳಿಯಬೇಕು."

ಬೈಬಲ್ಲಿನಲ್ಲಿ ಮೇರಿ ಮತ್ತು ಮಾರ್ಥಾ ಎಂಬ ಇಬ್ಬರು ಭಕ್ತ ಸಹೋದರಿಯರ ಕಥೆ ಬರುತ್ತದೆ. ಯೇಸುಕ್ರಿಸ್ತನು ಅವರ ಮನೆಗೆ ಅತಿಥಿಯಾಗಿ ಹೋಗುತ್ತಾನೆ. ಮೇರಿಯ ಆನಂದಸಂಭ್ರಮಕ್ಕೆ ಮಿತಿಯೇ ಇಲ್ಲ. ಆ ಆನಂದದಲ್ಲಿ ಮೈಮರೆಯುತ್ತಾಳೆ. ಯಾವ ಕೆಲಸವನ್ನೂ ಅವಳಿಗೆ ಮಾಡಲಾಗುವುದಿಲ್ಲ. ಕ್ರಿಸ್ತನ ಸನ್ನಿಧಿಯಲ್ಲಿಯೇ, ಅವನನ್ನು ಸಂತೋಷಪಡಿಸುವುದರಲ್ಲಿಯೇ ಸಂಪೂರ್ಣ ತಲ್ಲೀನಳಾಗುತ್ತಾಳೆ. ಆಕೆಯ ಸಹೋದರಿ ಮಾರ್ಥಾ ಮನೆಗೆಲಸ ಮತ್ತು ಅಡುಗೆ ಮಾಡುವುದರಲ್ಲಿ ಮಗ್ನಳಾಗಿರುತ್ತಾಳೆ; ಮೇರಿ ತನ್ನ ಸಹಾಯಕ್ಕೆ ಬರದಿರುವುದರ ಬಗ್ಗೆ ತನ್ನ ಅಸಮಾಧಾನವನ್ನು ವ್ಯಕ್ತಪಡಿಸುತ್ತಾಳೆ. ಆದರೆ ಕ್ರಿಸ್ತನು, ಮೇರಿ ಮಾಡುತ್ತಿರುವುದೇ ಸರಿ ಎಂದು ಆಕೆಯನ್ನೇ ಸಮರ್ಥಿಸುತ್ತಾನೆ. ಇಲ್ಲಿ ಮೇರಿಯು ತನ್ನ ಭಕ್ತಿಯ ಆಧಿಕ್ಯದಿಂದ ಕರ್ಮವನ್ನು ಮೀರಿಹೋಗಿದ್ದಳು, ಅವಳ ಕರ್ಮ ಬಿದ್ದುಹೋಗಿತ್ತು. ಆದರೆ ಮಾರ್ಥಾಳಲ್ಲಿ ಅಷ್ಟೊಂದು ಭಕ್ತಿ ಇಲ್ಲದಿದ್ದುದರಿಂದ ಮತ್ತು ಕರ್ತೃತ್ವ ಭಾವವಿದ್ದುದರಿಂದ ಇನ್ನೂ ಕರ್ಮದಲ್ಲಿ ತೊಡಗಿರುವುದು ಅವಳಿಗೆ ಅವಶ್ಯವಾಗಿತ್ತು. ಮೇರಿಯ ಮನಃಸ್ಥಿತಿಯು ಶ್ರೀಕೃಷ್ಣನು ಒಂಬತ್ತನೆಯ ಅಧ್ಯಾಯದಲ್ಲಿ ಹೇಳುವ ಭಕ್ತನ ಸ್ಥಿತಿಗೆ ಸಮಾನವಾಗಿದೆ ಎನ್ನಬಹುದು:

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ।**
**ತೇಷಾಂ ನಿತ್ಯಾಭಿಯುಕ್ತಾನಾಂ**
**ಯೋಗಕ್ಷೇಮಂ ವಹಾಮ್ಯಹಮ್॥**

"ಅನ್ಯಮನಸ್ಕರಾಗದೆ ನನ್ನನ್ನೇ ಧ್ಯಾನಿಸುತ್ತಾ ಯಾವ ಜನರು ನನ್ನನ್ನು ಉಪಾಸಿಸುತ್ತಾರೋ ಅಂತಹ ನಿತ್ಯಯುಕ್ತರಾದ ಭಕ್ತರ ಯೋಗಕ್ಷೇಮವನ್ನು ನಾನು ವಹಿಸಿಕೊಳ್ಳುತ್ತೇನೆ" (೯ : ೨೨).

ಕರ್ಮವನ್ನು ಬಿಟ್ಟಮಾತ್ರಕ್ಕೆ ಸಾಧನೆ ಸಾಧ್ಯವಾಗುವುದಿಲ್ಲ. ಸಾಧನೆಯಲ್ಲಿ ಮುಂದುವರಿದಂತೆ ಕರ್ಮಗಳು ಒಂದೊಂದಾಗಿ ಬಿದ್ದುಹೋಗುತ್ತವೆ. ಭಗವಂತನೇ ನಮ್ಮ ಜವಾಬ್ದಾರಿಗಳನ್ನೂ, ಕರ್ಮಗಳನ್ನೂ ಕಡಮೆ ಮಾಡುತ್ತ ಬರುತ್ತಾನೆ. ಶ್ರೀರಾಮಕೃಷ್ಣರು ಹೇಳುವಂತೆ, ಸೊಸೆ ಗರ್ಭಿಣಿಯಾದ ಮೇಲೆ ಅತ್ತೆಯು ಅವಳ ಕೆಲಸವನ್ನು ಕಡಮೆ ಮಾಡುತ್ತ ಬರುತ್ತಾಳೆ. ಮಗು ಹುಟ್ಟಿದ ಮೇಲಂತೂ ಕೇವಲ ಮಗುವನ್ನು ಮುದ್ದಿಸುವುದೊಂದೇ ಕೆಲಸ, ಬೇರಾವ ಕೆಲಸವೂ ಇರುವುದಿಲ್ಲ. ಕ್ಷಿಪಣಿ ಮೇಲೆ ಹಾರಿಹೋಗುವಾಗ ಒಂದೊಂದೇ ಭಾಗವನ್ನು ಕಳಚಿಕೊಂಡು ಮುಂದುವರಿಯುತ್ತದೆ. ಹಾಗೆಯೇ ಸಾಧನೆಯಲ್ಲಿ ಮುಂದುವರಿದಂತೆ ಕೆಲಸಗಳೂ ಒಂದೊಂದಾಗಿ ಬಿದ್ದುಹೋಗುತ್ತವೆ. ಸಾಧನೆಯ ಸಮಯದಲ್ಲಿ ನಾವು ಎಷ್ಟೋ ಕಾಮಕ್ರೋಧಾದಿ ಭಾವಗಳನ್ನು, ಅವು ಸಾಧನೆಗೆ ವಿರೋಧವಾಗಿರುವುದರಿಂದ ಅದುಮಿಡುತ್ತೇವೆ, ಸರಿಯಾದ ರೀತಿಯಲ್ಲಿ ಅವನ್ನು ಉದಾತ್ತೀಕರಿಸಲು ಸಾಧ್ಯವಾಗಿರುವುದಿಲ್ಲ. ಏಕೆಂದರೆ ನಮ್ಮಲ್ಲಿ ಅಷ್ಟೊಂದು ತೀವ್ರವಾದ ಆಧ್ಯಾತ್ಮಿಕ ಹಂಬಲ ಇರುವುದಿಲ್ಲ. ಆರೋಗ್ಯಕರವಾದ ಕೆಲಸ, ಸೇವೆ ಮುಂತಾದವುಗಳ ಮೂಲಕ ಇವು ರಚನಾತ್ಮಕವಾಗಿ ವ್ಯಕ್ತವಾಗುತ್ತವೆ. ಪ್ರಾರಂಭದಲ್ಲಿ ಸಾಧನೆಯು ಸಾಮಾನ್ಯವಾಗಿ ನರಬಿಗಿತವನ್ನು ಹೆಚ್ಚಿಸುತ್ತದೆ. ಕೆಲಸ ಈ ಬಿಗಿತವನ್ನು ನಿವಾರಿಸುತ್ತದೆ. ವಿಶೇಷವಾಗಿ ಭೌತಿಕ ಕೆಲಸ ಈ ವಿಷಯದಲ್ಲಿ ತುಂಬ ಸಹಾಯಕಾರಿ. ಆದ್ದರಿಂದ **ಕರ್ಮ, ಅಧ್ಯಯನ** ಮತ್ತು **ಸಾಧನೆ** – ಇವು ಮೂರೂ ಸಮತೋಲನವಾಗಿ ಮುಂದುವರಿಯಬೇಕು. ಆಗ ಅವು ಪರಸ್ಪರ ಪೂರಕವಾಗುತ್ತವೆ. ಮುಂದೆ ಒಂದು ಉನ್ನತ ಧ್ಯಾನದ ಸ್ಥಿತಿಯನ್ನು ತಲುಪಿದಾಗ ಇವುಗಳ ಕಡೆ ಹೆಚ್ಚು ಗಮನ ಕೊಡಬೇಕಾಗಿಲ್ಲ. ಆಗ ಸಾಧಕನು ಕರ್ಮವನ್ನು ಮೀರಿ ಹೋಗುತ್ತಾನೆ. ಆದ್ದರಿಂದಲೇ ಶ್ರೀಕೃಷ್ಣನು ಹೀಗೆ ಹೇಳುತ್ತಾನೆ:

**ನ ಕರ್ಮಣಾಮನಾರಂಭಾತ್ ನೈಷ್ಕರ್ಮ್ಯಂ ಪುರುಷೋಽಶ್ನುತೇ।**
**ನ ಚ ಸಂನ್ಯಸನಾದೇವ ಸಿದ್ಧಿಂ ಸಮಧಿಗಚ್ಛತಿ ॥ (೩ : ೪ )**

"ಕರ್ಮವನ್ನು ಆರಂಭಿಸದೇ ಇರುವುದರಿಂದ ಮನುಷ್ಯನು ಕರ್ಮವನ್ನು ಮೀರಿದ ಸ್ಥಿತಿಯನ್ನು ಹೊಂದುವುದಿಲ್ಲ ಮತ್ತು ಬರಿಯ ಕರ್ಮತ್ಯಾಗದಿಂದಲೇ ಸಿದ್ಧಿಯನ್ನು ಹೊಂದುವುದಿಲ್ಲ."

ಇನ್ನೊಂದು ಕಡೆ ಶ್ರೀಕೃಷ್ಣನು ತನ್ನ ನಿಶ್ಚಿತವಾದ ಅಭಿಮತವನ್ನು ಹೀಗೆ ಹೇಳುತ್ತಾನೆ:

**ಯಜ್ಞದಾನತಪಃಕರ್ಮ ನ ತ್ಯಾಜ್ಯಂ ಕಾರ್ಯಮೇವ ತತ್ ।**
**ಯಜ್ಞೋ ದಾನಂ ತಪಶ್ಚೈವ ಪಾವನಾನಿ ಮನೀಷಿಣಾಮ್ ॥**
**(೧೮ : ೫)**

"ಯಜ್ಞ, ದಾನ ಮತ್ತು ತಪಸ್ಸು ಈ ಕರ್ಮಗಳನ್ನು ಬಿಡತಕ್ಕದ್ದಲ್ಲ, ಅವನ್ನು ಆಚರಿಸಲೇಬೇಕು. ಮನನಶೀಲರಿಗೆ (ಧ್ಯಾನಾಸಕ್ತರಿಗೆ) ಪವಿತ್ರತೆಯನ್ನು ಪಡೆಯಲು ಅವು ಸಹಾಯಕವಾಗುತ್ತವೆ."

ಕರ್ಮದ ಮೂಲಕವೇ ಕರ್ಮವನ್ನು ಮೀರಿ ಹೋಗಬೇಕು – ಈಜುತ್ತಲೇ ನದಿಯನ್ನು ದಾಟಿ ಹೋಗಬೇಕು. ಕರ್ಮವನ್ನು ಬಿಡುವುದರಿಂದ ಕರ್ಮಾತೀತರಾಗಲು ಸಾಧ್ಯವಿಲ್ಲ. ನಿಷ್ಕಾಮ ಭಾವದಿಂದ ಕರ್ಮವನ್ನು ಮಾಡುತ್ತ, ಸಾಧನೆಯಲ್ಲಿ ಮುಂದುವರಿದಂತೆಲ್ಲ ಸಾಧಕನು ಕರ್ಮದಲ್ಲೇ ಅಕರ್ಮವನ್ನೂ, ಅಕರ್ಮದಲ್ಲಿ ಕರ್ಮವನ್ನೂ ನೋಡುವ ಸ್ಥಿತಿಯನ್ನು ಪಡೆಯುತ್ತಾನೆ. ಶ್ರೀಕೃಷ್ಣನು ಹೇಳುತ್ತಾನೆ:

**ಕರ್ಮಣ್ಯಕರ್ಮ ಯಃ ಪಶ್ಯೇದಕರ್ಮಣಿ ಚ ಕರ್ಮ ಯಃ ।**
**ಸ ಬುದ್ಧಿಮಾನ್ ಮನುಷ್ಯೇಷು ಸ ಯುಕ್ತಃ ಕೃತ್ಸ್ನ ಕರ್ಮಕೃತ್ ॥**
**(೪ : ೧೮)**

"ಕರ್ಮದಲ್ಲಿ ಅಕರ್ಮವನ್ನೂ, ಅಕರ್ಮದಲ್ಲಿ ಕರ್ಮವನ್ನೂ ಯಾವನು ನೋಡುತ್ತಾನೆಯೋ ಅವನು ಮನುಷ್ಯರಲ್ಲಿ ಬುದ್ಧಿವಂತನು, ಆತ್ಮನಿಗ್ರಹವುಳ್ಳವನು ಮತ್ತು ಸಕಲ ಕರ್ಮಗಳನ್ನೂ ಮಾಡಿದವನು."

ಹೀಗೆ ನಾವು ಭಗವದ್ಗೀತೆಯಲ್ಲಿ ಕರ್ಮ ಮತ್ತು ಜ್ಞಾನಗಳ ಸಮುಚ್ಚಯವನ್ನು ಕಾಣುತ್ತೇವೆ.